## ಪಿಂಗಾಣಿ ಬಟ್ಟಲಲ್ಲಿ ನಾದಲೀಲೆ

‘ಪಿಂಗಾಣಿ ಬಟ್ಟಲಲ್ಲಿ ನಾದಲೀಲೆ’ (ಉಮಾ ಅನಂತ್, ಮಾ.10) ಲೇಖನ ಖುಷಿಕೊಟ್ಟಿತು. ನೀರಿರುವ ಪಿಂಗಾಣಿ ಬಟ್ಟಲಿನಲ್ಲಿ ಜಲತರಂಗ ನುಡಿಸುವ ಮೂಲಕ ಜನಮನ ಸೂರೆಗೊಂಡು ಹತ್ತು ಹಲವು ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡ ‘ಸ್ವರನಾದ’ ಸಂಗೀತ ವಿದ್ಯಾಲಯದ ಸ್ಥಾಪಕಿ ಕಲಘಟಗಿಯ ವಿದುಷಿ ಶಶಿಕಲಾ ದಾನಿ ಅವರ ಕಲಾಯಾನವನ್ನು ಲೇಖಕರು ಸೊಗಸಾಗಿ ಪರಿಚಯಿಸಿದ್ದಾರೆ.

—ಪಿ.ಜಯವಂತ ಪೈ, ಕುಂದಾಪುರ

## ಪ್ರೀತಿಯ ನದಿಯೇ ಅಮ್ಮನಾಗಿ...

‘ಪ್ರೀತಿಯ ನದಿಯೇ ಅಮ್ಮನಾಗಿ...’ (ಸುಧಾ ಬೆಳವಾಡಿ, ನಿರೂಪಣೆ: ಸುಶೀಲಾ ಡೋಣೂರ, ಮಾ. 10) ಓದಿದೆ. ನನ್ನ ನೆಚ್ಚಿನ ‘ಸುಧಾ’ ವಾರಪತ್ರಿಕೆಯಲ್ಲಿ ಭಾರ್ಗವಿ ಅವರ ಬಗ್ಗೆ ಅವರ ಮಗಳ ಲೇಖನ ನೋಡಿ ಬಹಳ ಖುಷಿಯಾಯಿತು.

—ಎಸ್. ವಿ. ಗೋಪಾಲ್ ರಾವ್, ಬೆಂಗಳೂರು

ಭಾರ್ಗವಿ ನಾರಾಯಣ್ ಅವರ ಅಗಲಿಕೆ ನೋವಿನ ಸಂಗತಿ. ಅವರ ಇಡೀ ಕುಟುಂಬ ಕಲೆಗಾಗಿ ಮೀಸಲಿಟ್ಟಿರುವ ರೀತಿ, ಸರಳ ಬದುಕು, ಸುಸಂಸ್ಕೃತ ನಡವಳಿಕೆ ಎಲ್ಲರ ಮನಸೂರೆಗೊಳ್ಳುವಂತಿದೆ. ಭಾರ್ಗವಿ ಅವರ ಮಗ ಪ್ರಕಾಶ್ ಬೆಳವಾಡಿ, ಮಗಳು ಸುಧಾ ಬೆಳವಾಡಿ, ‘ಗಂಟುಮೂಟೆ’ಯಲ್ಲಿ ನಟಿಸಿರುವ ತೇಜು ಬೆಳವಾಡಿ, ಸುಧಾ ಬೆಳವಾಡಿ ಅವರ ಮಗಳು ಸಂಯುಕ್ತ ಹೊರನಾಡು ಇವರೆಲ್ಲರ ನಟನೆ, ಎಲ್ಲವೂ ಮಾದರಿ ಎನ್ನಿಸುತ್ತದೆ. ಇದಕ್ಕೆಲ್ಲಾ ಕಾರಣ ಭಾರ್ಗವಿ ಅಮ್ಮ.

—ಶೋಭಾ ಕುಮಾರಸ್ವಾಮಿ ಎಚ್.ಎಸ್., ಚಿಕ್ಕಮಗಳೂರು

## ಮಂಡೋದರಿ

‘ಮಂಡೋದರಿ’ (ಕುಮುದಾ ಪುರುಷೋತ್ತಮ್, ಮಾ. 10) ಕಥೆ ಚೆನ್ನಾಗಿ ಮೂಡಿ ಬಂದಿದೆ. ಪಾತ್ರಗಳನ್ನು ಬೇರೆ ಬೇರೆ ಕೋನದಿಂದ ನೋಡಬಹುದಾಗಿದೆ.

—ಸತೀಶ್ ಕೆದಿಯಾಲ

ಕಥೆ ಸೊಗಸಾಗಿದೆ. ಮಂಡೋದರಿಯ ವ್ಯಕ್ತಿತ್ವವನ್ನು ಪರಿಚಯಿಸುವಲ್ಲಿ ಕಥೆ ಸಫಲವಾಗಿದೆ.

—ಸಿ.ಎಸ್. ಮುಕ್ತಾ



ಲೇಖಕಿಯ ಸೃಜನಶೀಲ ಪ್ರತಿಭೆ, ಕಥನಶೈಲಿ ಮನೋಜ್ಞವಾಗಿದೆ. ಕಥೆಯ ಒಳನೋಟವನ್ನು ಓದುಗರಿಗೆ ಮನಮುಟ್ಟುವಂತೆ ತಲುಪಿಸುವ ಬಗೆ ಅನನ್ಯವಾಗಿದೆ. ಕಥೆಗಾರ್ತಿಯಲ್ಲಿ ಭಾವೋಪಯೋಗಿ ಮತ್ತು ಲೋಕೋಪಯೋಗಿ ಸಾಹಿತ್ಯ ಸೃಷ್ಟಿಯ ಅಸಾಧಾರಣ ಸೃಜನಶೀಲತೆ ಇದೆಯೆಂಬುದನ್ನು ಈ ಸಣ್ಣ ಕಥೆ ತೋರಿಸುತ್ತದೆ.

—ಜಿ.ಕೆ. ಕಂಚೀವರದಯ್ಯ, ಕೊಳಪಾಳ

ಕಥೆ ಚೆನ್ನಾಗಿದೆ. ಸಾಮ್ರಾಜ್ಞಿಯಾಗಿದ್ದರೂ, ಚಿಂತೆ, ವ್ಯಥೆಗಳು ಮಂಡೋದರಿಯ ಬೆನ್ನುಬಿಡಲಿಲ್ಲ. ಇಬ್ಬಂದಿಯಲ್ಲಿ ಸಿಲುಕಿದ ಅವಳ ಮನಸ್ಸಿನ ಹೊಯ್ದಾಟವನ್ನು ಲೇಖಕರು ಚೆನ್ನಾಗಿ ವರ್ಣಿಸಿದ್ದಾರೆ. ಸೀತೆಯನ್ನು ಮನೆಯ ಮಗಳಂತೆ ಆದರಿಸುವ ಮಂಡೋದರಿಯ ಮನೋಭಾವ ಮನ ಮುಟ್ಟುವಂತಿದೆ.

—ಪ್ರಭಾಪ್ರಸಾದ್, ಬೆಂಗಳೂರು

ಕಥೆ ತುಂಬಾ ಇಷ್ಟವಾಯ್ತು. ಈ ರೀತಿಯ ಸಣ್ಣ ಸಣ್ಣ ಘಟನೆಗಳು, ಮನತಟ್ಟುವ ಸನ್ನಿವೇಶಗಳು ಹೆಚ್ಚಾಗಿ ಓದುಗರನ್ನು ತಲುಪಬೇಕಾಗಿದೆ.

—ನಾಗವೇಣಿ, ಕಗ್ಗಲೀಪುರ

## ಟೆನ್ನಿಸ್ ಅಮ್ಮ

‘ಟೆನ್ನಿಸ್ ಅಮ್ಮ’ (ಪ್ರಮೋದ, ಮಾ. 10) ಲೇಖನ ಎಲ್ಲಾ ಮಹಿಳೆಯರಿಗೂ ಸ್ಫೂರ್ತಿದಾಯಕ. ಭಾರತದ ಕ್ರೀಡೆಗೆ ಹೊಸ ದಿಕ್ಕು ತೋರಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಸಾನಿಯಾ ಮಿರ್ಜಾ ಅವರು ಪಟ್ಟ ಶ್ರಮ, ಎದುರಿಸಿದ ಸವಾಲು ಅನೇಕ. ಬಾಲ್ಯದಿಂದಲೇ ಆರಂಭವಾದ ಇವರ ಟೆನ್ನಿಸ್ ಪಯಣ ಈಗ ‘ಅಮ್ಮ’ನಾಗುವ ತನಕ ಬಂದು ನಿಂತಿದೆ. ಸಾನಿಯಾ ನಡೆದುಬಂದ ಹಾದಿಯ ಪಕ್ಷಿನೋಟದಂತಿರುವ ಈ ಲೇಖನ ಪ್ರೇರಣಾದಾಯಕ.

—ಕೃತಿ, ಪುತ್ತೂರು

## ಇಬ್ಬರ ನಡುವಿನ ಮುದ್ದಿನ ಮಗು

‘ಇಬ್ಬರ ನಡುವಿನ ಮುದ್ದಿನ ಮಗು’ (ಸ್ವಯಂಪ್ರಭಾ ಮಾ. 10) ಉಪಯುಕ್ತ ಲೇಖನ. ಆದರೆ ನಮ್ಮಂಥವರು ಏನು ಮಾಡಬೇಕು? ನನಗಿರುವುದು ಒಬ್ಬನೇ ಮಗ. ಇನ್ನೊಂದು ಮಗು ಇದ್ದರೆ ಅನುಕೂಲ ಅನಿಸುತ್ತೆ. ಆದರೆ ನನಗೆ ಆರೋಗ್ಯದ ಸಮಸ್ಯೆಗಳಿವೆ. ಹಾಗಾಗಿ ಇನ್ನೊಂದು ಮಗು ಬೇಡ ಎಂದು ತೀರ್ಮಾನಿಸಿದ್ದೇವೆ. ಇದು ಕೆಲವೊಮ್ಮೆ ಬೇಕು–ಬೇಡಗಳ ನಡುವೆ ಹೊಯ್ದಾಟವನ್ನುಂಟು ಮಾಡುತ್ತದೆ. ದಯವಿಟ್ಟು ಸಲಹೆ ನೀಡಿ.

—ಮಹಾಲಕ್ಷ್ಮೀ

## ಅಮ್ಮನಿಗೇನೂ ಗೊತ್ತಿಲ್ಲ ಅಂತೀರಾ

‘ಅಮ್ಮನಿಗೇನೂ ಗೊತ್ತಿಲ್ಲ ಅಂತೀರಾ’ (ಸ್ವಯಂಪ್ರಭಾ, ಜ. 27) ಬರಹ ಸತ್ಯಕ್ಕೆ ಹತ್ತಿರವಾಗಿದೆ. ಅಮ್ಮನ ಬಗ್ಗೆ ಲಘು ಮಾತು ಗಂಡುಮಕ್ಕಳ ಮನಸ್ಸಿನಲ್ಲಿ ಹೆಣ್ಣಿನ ಬಗ್ಗೆ ಲಘು ಭಾವನೆ ಬಿತ್ತುತ್ತದೆ. ಅಮ್ಮನ ಬಗ್ಗೆ ಗೌರವ ಅಗತ್ಯ.

—ಕಾಂತಿ ಪಿ.

## ಎಲ್ಲೆಗಳ ಮೀರಿದ ಎಲ್ಲೋರಾ

‘ಎಲ್ಲೆಗಳ ಮೀರಿದ ಎಲ್ಲೋರಾ’ (ಸುಚಿತ್ರಾ ಹೆಗಡೆ, ಮಾ. 17) ಲೇಖನ ಓದುತ್ತಿದ್ದಂತೆ ನಾನು ಆ ಸ್ಥಳಕ್ಕೆ ಭೇಟಿ ನೀಡಿದ ದಿನದ ನೆನಪು ಮರುಕಳಿಸಿತು. ಯಾವುದೇ ಎಂಜಿನಿಯರಿಂಗ್ ತಾಂತ್ರಿಕತೆ ಅಭಿವೃದ್ಧಿ ಹೊಂದಿರದ ಕಾಲದಲ್ಲಿ ನಮ್ಮ ಪೂರ್ವಜರು ಅದು ಯಾವ ರೀತಿಯ ತಂತ್ರಜ್ಞಾನ ಅನುಸರಿಸಿ ಇಲ್ಲಿನ ಕಲಾಕೃತಿಗಳನ್ನು ನಿರ್ಮಿಸಿದರೋ ಎನ್ನುವಾಗ ಅವರ ಬಗ್ಗೆ ಹೆಮ್ಮೆ ಎನಿಸುತ್ತದೆ. ಎಲ್ಲರೂ ನೋಡಬೇಕಾದ ತಾಣ ಎಲ್ಲೋರಾ.

—ಪಿ. ವಾಸುದೇವ್ ಭಟ್ ಉಡುಪಿ



## ಪ್ರಥಮ ಮಹಿಳಾ ಯಕ್ಷಗಾನ ತಂಡ

‘ಪ್ರಮೀಳಾ ರಾಜ್ಯ’ (ಕೋಡಿಬೆಟ್ಟು ರಾಜಲಕ್ಷ್ಮಿ, ಮಾ. 3) ಯಕ್ಷಗಾನದ ಕುರಿತ ಲೇಖನ ಉಪಯುಕ್ತವಾಗಿತ್ತು. ಇದಕ್ಕೊಂದು ಪೂರಕ ಮಾಹಿತಿ: 1953ರಲ್ಲಿ ದಿ. ಮಾಸ್ಕೇರಿ ತಿಮ್ಮಣ್ಣ ಹಮ್ಮಣ್ಣ ನಾಯಕ ಅವರು ‘ಶ್ರೀ ಶಾಂತಿಕಾ ಪರಮೇಶ್ವರಿ ಮಹಿಳಾ ಯಕ್ಷಗಾನ ಮಂಡಳಿ ನಾಡುಮಾಸ್ಕೇರಿ’ ಕಟ್ಟಿ ಅದರ ಅಡಿಯಲ್ಲಿ ಉತ್ತರ ಕನ್ನಡ ಜಿಲ್ಲೆ ಹಾಗೂ ಇತರ ಜಿಲ್ಲೆಗಳಲ್ಲಿ ಮಹಿಳೆಯರ ಯಕ್ಷಗಾನ ಆಡಿದ್ದರು. ಇದು ಉತ್ತರ ಕನ್ನಡದ ಪ್ರಥಮ ಯಕ್ಷಗಾನ ಮಂಡಳಿ ಎಂದು ಹೇಳಲಾಗುತ್ತದೆ. ಈ ತಂಡದಲ್ಲಿ ಅತಿ ಹಿಂದುಳಿದ ಆಗೇರ, ಹಾಲಕ್ಕಿ ಗೌಡರನ್ನು ಒಳಗೊಂಡು ನಾಡವರ ಮಹಿಳೆಯರು ಇದ್ದರಂತೆ. ಆಗ ತಿಮ್ಮಣ್ಣ ಗಾಂವಕರರ ಜೊತೆಗೆ ಹನೇಹಳ್ಳಿಯ ಬೊಮಯ್ಯ ನಾಯಕ ಅವರು ಕೂಡ ತರಬೇತಿ ನೀಡುತ್ತಿದ್ದರಂತೆ.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in